ಓ ಎಸ್ ನಂ. 64/2021
ಪಿ ಡಬ್ಲ್ಯೂ: 1
ದಿನಾಂಕ 03-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 5, 10 ಮತ್ತು 11ನೇ ಪ್ರತಿವಾದಿ ಪರ: ಶ್ರೀ ಬಿ ಎಂ ಎಂ ವಕೀಲರಿಂದ:

ನನ್ನ ಜನ್ಮ ದಿನಾಂಕ 16/09/1994 ಆಗಿರುತ್ತದೆ. ನನ್ನ ತಂದೆಯ ಹೆಸರು ಪರಮೇಶ್ವರಪ್ಪ. ನನ್ನ ತಂದೆ 2018 ರಲ್ಲಿ ಮರಣ ಹೊಂದಿರಬಹುದು. ನನ್ನ ಅಜ್ಜನ ಹೆಸರು ಕರಿಯಪ್ಪ. ನನ್ನ ಅಜ್ಜ ಕರಿಯಪ್ಪ ಮರಣ ಹೊಂದಿರುತ್ತಾರೆ ಎಂದರೆ ನಿಜ. ನನ್ನ ಅಜ್ಜ ಮರಣ ಹೊಂದಿದ ಇಸವಿ ನನಗೆ ಗೊತ್ತಿಲ್ಲ. ನನಗೆ 13 ವರ್ಷ ವಯಸ್ಸಾಗಿದ್ದಾಗ ನನ್ನ ಅಜ್ಜ ಮರಣ ಹೊಂದಿರುತ್ತಾರೆ. ನನ್ನ ಮುತ್ತಜ್ಜನ ಹೆಸರು ಕೊಪ್ಪಲುರಂಗಪ್ಪ. ದಾವಾ ಆಸ್ತಿಗಳು ಕೊಪ್ಪಲುರಂಗಪ್ಪನವರಿಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಳೆಯ ಪಹಣಿಗಳು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಅಂತಹ ಯಾವುದೇ ದಾಖಲೆ ಹಾಜರುಪಡಿಸದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳಲ್ಲಿ ಸಂಬಂದಪಟ್ಟ ಹಳೆಯ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ಆಸ್ತಿಗಳು ಮೂಡಲಗಿರಿಯಪ್ಪನ ಹೆಸರಿಗೆ ಅವರ ತಂದೆಯಿಂದ ಪೌತಿ ಖಾತೆಯಿಂದ ಬಂದಿರುತ್ತದೆ. ಮೂಡಲಗಿರಿಯಪ್ಪನವರ ತಂದೆಗೆ ನನ್ನ

ಅಜ್ಜನಾದ ಕೊಪ್ಪಲುರಂಗಪ್ಪನಿಂದ ಬಂದಿರುತ್ತದೆ. ಕೊಪ್ಪಲುರಂಗಪ್ಪನಿಂದ ಮೂಡಲಗಿರಿಯಪ್ಪನವರ ತಂದೆಗೆ ಬಂದಿತ್ತು ಎಂದು ತೋರಿಸಲು ಹಳೆಯ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ದಾವಾ ಐಟಂ ನಂ.1ರ ಆಸ್ತಿಯನ್ನು ಕೊಪ್ಪಲುರಂಗಪ್ಪನವರಿಗೆ ಸೇರಿದ್ದಲ್ಲ, ಸದರಿ ಆಸ್ತಿಗಳನ್ನು ದಿನಾಂಕ 18/12/1957 ರಂದು ಹನುಮಂತಪ್ಪನವರು ಸಗನಣ್ಣ ಬಿನ್ ಕರಿಯಪ್ಪ ಇವರಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ ನಂ.2ರ ಆಸ್ತಿಯನ್ನು ಕೊಪ್ಪಲುರಂಗಪ್ಪನವರಿಗೆ ಸೇರಿದ್ದಲ್ಲ, ಸದರಿ ಆಸ್ತಿಯನ್ನು ದಿನಾಂಕ 18/09/1968 ರಂದು ಹನುಮಂತಪ್ಪನವರು ವೈ ಜಿ ಕರಿಯಪ್ಪ ಬಿನ್ ಗೋವಿಂದಪ್ಪ ಇವರಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ.

ನನ್ನ ಮುತ್ತಜ್ಜ ಮರಣ ಹೊಂದಿ ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ. ನಾನು ಹುಟ್ಟುವ ಮೊದಲು ನಮ್ಮ ಕುಟುಂಬದಲ್ಲಿ ನಡೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತನಿಂದ ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ತಾತನಿಗೆ ವಿಭಾಗ ಕೊಟ್ಟಿಲ್ಲ ಎಂದು ನನ್ನ ತಾತ ಹೇಳಿರುತ್ತಾರೆ. ನನ್ನ ಅಜ್ಜ ಬದುಕಿದ್ದಾಗ ಅವರ ಸಹೋದರರ ನಡುವೆ ವಿಭಾಗ ಕೋರಿ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ನನ್ನ ತಂದೆ ಬದುಕಿದ್ದಾಗ ವಿಭಾಗ ಕೋರಿ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ.

ದಾವಾ ಐಟಂ ನಂ.3 ಮತ್ತು 4 ರ ಆಸ್ತಿಗಳು ಗೋವಿಂದಪ್ಪನ ಹೆಸರಿಗೆ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು ಒಟ್ಟು ಕುಟುಂಬದ ಆಸ್ತಿಗಳು ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ.3 ಮತ್ತು 4 ರ ಆಸ್ತಿಗಳನ್ನು ದಿನಾಂಕ 18/09/1968 ರಂದು ವೈ ಜಿ ಕರಿಯಪ್ಪ ಬಿನ್ ಹೆಬ್ಬಾಗಿಲು ಗೋವಿಂದಪ್ಪನವರಿಂದ ಗೋವಿಂದಪ್ಪನವರು ಖರೀದಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತ ಒಟ್ಟಿಗೆ ಇದ್ದಾಗ ಖರೀದಿಸಲಾಗಿದೆ ಎಂದು ನುಡಿದಿರುತ್ತಾರೆ. ನನ್ನ ತಾತ 1958 ರಲ್ಲಿ ಅವರ ಕುಟುಂಬದಲ್ಲಿ ಮೌಖಿಕ ವಿಭಜನೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ವಿಭಾಗವಾದ ನಂತರ ಗೋವಿಂದಪ್ಪನವರು ದಾವಾ ಐಟಂ ನಂ.1 ರಿಂದ 4 ರ ಆಸ್ತಿಗಳನ್ನು ಸ್ವಯಾರ್ಜಿತವಾಗಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನ ಅಜ್ಜ ಮತ್ತು ತಂದೆಗೆ ಸರ್ವೆ ನಂ.57 ರಲ್ಲಿ ತಲಾ 30 ಗುಂಟೆ ಹಿಸ್ಸೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಭಜನೆಯಾಗಿಲ್ಲ ಎಂದು ನುಡಿದಿರುತ್ತಾರೆ. ನನ್ನ ಅಜ್ಜನಿಗೆ ಯರೇಹಳ್ಳಿ ಗ್ರಾಮದಲ್ಲಿ ಎರಡು ಮನೆ ನನ್ನ ಅಜ್ಜನ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಮನೆಗಳನ್ನು ನನ್ನ ಅಜ್ಜ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ಬೀರೂರು ಕಾವಲು ಸರ್ವೆ ನಂ.4 ರಲ್ಲಿ 30 ಗುಂಟೆ ಮತ್ತು ಯರೇಹಳ್ಳಿ ಗ್ರಾಮದ ಸರ್ವೆ ನಂ.47/1 ರಲ್ಲಿ 24 ಗುಂಟೆ ಆಸ್ತಿ ಬಂದಿತ್ತು ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ, ಅವರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಅವುಗಳು ಅವರ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ನಾನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.